Indian Journal of History and Archaeology

ISSN (E): 2582-225X
Vol-1 Issue 4, NOV-DEC, 2019, 27-38

# ಅಂಬೇಡ್ಕರ್ ಮತ್ತು ರಾಷ್ಟ್ರೀಯತೆಯ ಪರಿಕಲ್ಪನೆ

**– ಡಾ.ಎಂ.ರಾಚಪ್ಪಾಜಿ**

**ಡಾ.ಎಂ.ರಾಚಪ್ಪಾಜಿ**
ಅಧ್ಯಾಪಕರು
ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ
ಹಾಗೂ ವಿಸ್ತರಣ ಕೇಂದ್ರ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

**ಭಾರತದ** ಸಂದರ್ಭದಲ್ಲಿ ರಾಷ್ಟ್ರ ಮತ್ತು ರಾಷ್ಟ್ರೀಯತೆ ಎಂಬ ಪರಿಕಲ್ಪನೆಗಳು ಬಹಳ ಮಹತ್ತರವಾದುದಾಗಿದೆ. ಏಕೆಂದರೆ, ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಿರುವ ಭಾರತವನ್ನು ಅವರ ನೌಕರಶಾಹಿ ವ್ಯವಸ್ಥೆಯಿಂದ ಬಿಡುಗಡೆಗೊಳಿಸಲು ಭಾರತದಲ್ಲಿ ಸರಿಸುಮಾರು 1857 ರಿಂದ ಚಳುವಳಿಗಳು ಪ್ರಾರಂಭವಾಗಿರುತ್ತದೆ. ಇದು ಭಾರತದ ಜಾತಿಹಿಂದೂಗಳಿಂದ ಬ್ರಿಟಿಷರ ವಿರುದ್ಧದ ಪ್ರಪ್ರಥಮ ವಿರೋಧ ಚಳುವಳಿ ಆಗಿರುತ್ತದೆ. ಇಲ್ಲಿಂದ ಪ್ರಾರಂಭವಾದ ಸ್ವತಂತ್ರ್ಯದ ಪ್ರಶ್ನೆಯನ್ನು ಕುರಿತ ಸಂಗ್ರಾಮ 1947ರ ಆಗಸ್ಟ್ 14ಕ್ಕೆ ಕೊನೆಗೊಂಡು, 15ಕ್ಕೆ ಭಾರತವು ಸ್ವತಂತ್ರಗೊಂಡಿರುತ್ತದೆ. ಈ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಭಾರತದ ಇತರ ನಾಯಕರಿಗಿಂತ ಸ್ವತಂತ್ರ ಚಳುವಳಿಯಲ್ಲಿ ವಿಭಿನ್ನವಾದಂತಹ ನಿಲುವನ್ನು ಹೊಂದಿದ್ದರು.

ಅಂಬೇಡ್ಕರ್ ಅವರು ರಾಷ್ಟ್ರ ನಿರ್ಮಾಣದಲ್ಲಿ ನಿರ್ವಹಿಸಿದ ಪಾತ್ರವನ್ನು ಇಲ್ಲಿ ಕಾಣಬಹುದು. ಅವರು ರಾಷ್ಟ್ರೀಯತೆ ಹಾಗೂ ರಾಷ್ಟ್ರದ ಪರಿಕಲ್ಪನೆಯ ಬಗೆಗೆ ಹೊಂದಿದ್ದಂತಹ ಧೋರಣಾ ನಿಲುವುಗಳನ್ನು ನಿರೂಪಿಸುತ್ತದೆ. ಮತ್ತೇ, ಭಾರತದಲ್ಲಿ ಇದ್ದಂತಹ ವರ್ಣವ್ಯವಸ್ಥೆ ವಿರುದ್ಧವಾಗಿ ಇವರು ಹೂಡಿರುವ ಸಾಮಾಜಿಕ ಕ್ರಾಂತಿಯನ್ನು ಇಲ್ಲಿ ಅರಿಯಲಾಗಿದೆ. ಹಾಗೆಯೇ, ರಾಷ್ಟ್ರೀಯತೆ ಎಂದರೆ ಒಂದೇ ಭಾಷೆ, ಒಂದೇ ಸಂಸ್ಕೃತಿ, ಒಂದೇ ಬುಡಕಟ್ಟು, ಒಂದೇ ಧರ್ಮ, ಇತಿಹಾಸ ಹಾಗೂ ರಾಜಕೀಯ ಅಭಿಪ್ರಾಯಗಳ ಐಕ್ಯತೆ ಇವುಗಳ ಪ್ರಧಾನ ಸಂಗಮವೇ ರಾಷ್ಟ್ರೀಯತೆ ಎಂದಿರುವುದನ್ನು

ಕಾಣಬಹುದು. ಅಂಬೇಡ್ಕರ್ ಅವರು ರಾಷ್ಟ್ರ ಹಾಗೂ ರಾಷ್ಟ್ರೀಯತೆಯ ಪರಿಕಲ್ಪನೆಗಳನ್ನು ಹೊಂದಿದ್ದಂತಹ ರೀತಿ–ನೀತಿಗಳು ಕೂಡ ಅವರ ವ್ಯಕ್ತಿತ್ವ ಹಾಗೂ ತಜ್ಞತೆಯನ್ನು ಪ್ರಚುರಪಡಿಸುತ್ತದೆ.

**ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಪರಿಕಲ್ಪನೆಗಳು**

ರಾಷ್ಟ್ರ ಮತ್ತು ರಾಷ್ಟ್ರೀಯತೆ ಎಂಬುದು ಒಂದು ಐತಿಹಾಸಿಕ ಪರಿಕಲ್ಪನೆಯಾಗಿರುತ್ತದೆ. ಆದ್ದರಿಂದಲೇ ಇದು ಒಂದು ಮಾನವ ನಿರ್ಮಿತ ಭಾವನಾತ್ಮಕತೆಯ ಸ್ವರೂಪವನ್ನು ಹೊಂದಿದೆ. ಪ್ರಾಚೀನ ಕಾಲದಿಂದ ಪ್ರಸ್ತುತದವರೆಗೆ ಜಗತ್ತಿನ ಸಾಮಾಜಿಕ, ಆರ್ಥಿಕ, ರಾಜಕೀಯ ವಿದ್ಯಮಾನಗಳ ಭಾವನಾತ್ಮಕ ಸಂಬಂಧದ ಹಿನ್ನೆಲೆಯಲ್ಲಿಯೇ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ವ್ಯಕ್ತವಾಗುತ್ತಾ ಬಂದಿರುವ ವಾದವೇ ರಾಷ್ಟ್ರೀಯವಾದವಾಗಿದೆ. ಆದರೆ, ಈ ಭಾವನಾತ್ಮಕ ರಾಷ್ಟ್ರೀಯತೆಯ ಪರಿಕಲ್ಪನೆ ಕಾಲದಿಂದ ಕಾಲಕ್ಕೆ ಹಾಗೂ ಪ್ರದೇಶದಿಂದ ಪ್ರದೇಶಕ್ಕೆ ಮತ್ತು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನತೆಯಿಂದ ಕೂಡಿರುತ್ತದೆ. ಅಲ್ಲದೆ ಪ್ರಾಚೀನ ಕಾಲದಲ್ಲಿದ್ದ ರಾಜಪ್ರಭುತ್ವದ ಸಾಮ್ರಾಜ್ಯಗಳನ್ನು ಇಂದು ಕಾಣಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಅಂಬೇಡ್ಕರ್ ರಾಷ್ಟ್ರೀಯತೆಯನ್ನು ಎರಡು ಅಲಗುಗಳುಳ್ಳ ಕತ್ತಿ ಇದ್ದಂತೆ ಎಂದಿದ್ದರು. ಅಂಬೇಡ್ಕರ್ ಹೇಳುವಂತೆ ರಾಷ್ಟ್ರೀಯತೆ ಎಂಬ ಭಾವನಾತ್ಮಕ ಸಂಬಂಧವು ಕೆಲವೊಂದು ಸಂದರ್ಭದಲ್ಲಿ ಅಜಾಗರೂಕವಾದ ಹಾಗೂ ಹಿಂಸಾತ್ಮಕವಾದ ಘಟನೆಗಳಿಗೆ ಪ್ರೇರಣೆಯಾಗುವ ಸಾಧ್ಯತೆ ಇರುತ್ತದೆ. ಈ ನಿಲುವನ್ನು ಅಂಬೇಡ್ಕರ್ ಅವರು ಭಾರತ ಮತ್ತು ಪಾಕಿಸ್ತಾನ ವಿಭಜನೆಯ ವಿಷಯದಲ್ಲಿ ದೃಢಪಡಿಸಿರುತ್ತಾರೆ.

ಅಂಬೇಡ್ಕರ್ ಅವರು ರಾಷ್ಟ್ರದ ಸ್ವಾತಂತ್ರ್ಯ ಮತ್ತು ರಾಷ್ಟ್ರದಲ್ಲಿನ ಜನತೆಯ ಸ್ವಾತಂತ್ರ್ಯ ಎರಡನ್ನು ಪ್ರತ್ಯೇಕವಾಗಿಯೇ ಅರ್ಥೈಸುತ್ತಾರೆ. ಈ ವಿಷಯದಲ್ಲಿ ಪಾಶ್ಚಿಮಾತ್ಯ ರಾಜಕೀಯ ಚಿಂತಕರು ಪ್ರತಿಪಾದಿಸುವ ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ನೀಡಿದ ಹೆಚ್ಚಿನ ಪ್ರಾಧಾನ್ಯತೆಯನ್ನು ಅಂಬೇಡ್ಕರ್ ಟೀಕಿಸುತ್ತಾರೆ. ಹಾಗಾಗಿಯೇ, ರಾಷ್ಟ್ರೀಯತೆ ಎಂದರೆ ರಾಷ್ಟ್ರೀಯ ಸ್ವಾತಂತ್ರ್ಯಕ್ಕಿಂತ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಪ್ರಾಶಸ್ತ್ಯ ನೀಡುವಂತಿರಬೇಕೆಂದಿದ್ದಾರೆ. ಇದಕ್ಕಾಗಿ ಅವರು ಬ್ರಿಟೀಷ್ ಆಡಳಿತವನ್ನು ಬಹುಕಟುವಾಗಿ ಟೀಕಿಸುತ್ತಾರೆ. ಬ್ರಿಟೀಷ್ ಆಡಳಿತ ಭಾರತದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ತಾಳುವ ಸೋಗುಹಾಕುವತ್ತ ಒಂದು ರೀತಿಯ ತನ್ನೀ ಧೋರಣೆಗಳನ್ನು ತಾಳಿದೆ. ಏಕೆಂದರೆ, ಇದು ಭಾರತದಲ್ಲಿ ಪ್ರಬಲವಾಗಿ ಆಚರಣೆಯಲ್ಲಿರುವ ಅಸಮಾನತೆಯನ್ನೊಳಗೊಂಡ ಹಲವಾರು ಅಪರೂಪ ಶೋಷಣೆಗಳಿಂದ ಕೆಳವರ್ಗದ ಜನತೆಯನ್ನು ರಕ್ಷಿಸುವಲ್ಲಿ ವಿಫಲವಾಗಿದ್ದು ಮತ್ತು ಇದು ಮಾನವ ಹಕ್ಕುಗಳ ಸಮಗ್ರ ಉಲ್ಲಂಘನೆಯಾಗಿದ್ದು, ಬ್ರಿಟಿಷ್ ಆಡಳಿತದ ಅವಧಿಯಲ್ಲಿನ ಭಾರತವನ್ನು ರಾಷ್ಟ್ರೀಯತೆ ಅಥವಾ ರಾಷ್ಟ್ರ ನಿರ್ಮಾಣದ ಹಿನ್ನೆಲೆಯಲ್ಲಿ ಗ್ರಹಿಸಲು ಸಾಧ್ಯವಿಲ್ಲ.

ಅರಿಸ್ಟಾಟಲ್ ಅವರ ಪ್ರಕಾರ ರಾಜ್ಯ ಅಥವಾ ರಾಷ್ಟ್ರ ಎಂದರೆ ಸಮಾಜದಲ್ಲಿನ ಪ್ರತಿಯೊಬ್ಬ ಪ್ರಜೆಯು ಗೌರವಯುತವಾದ ಹಾಗೂ ನೆಮ್ಮದಿಯಿಂದ ಕೂಡಿದ ಸ್ವಾವಲಂಬಿ ಜೀವನವನ್ನು ನಡೆಸಲು ಪೂರಕವಾದ ಸನ್ನಿವೇಶಗಳನ್ನು ಹೊಂದಿರುವ ಕುಟುಂಬ ಮತ್ತು ಗ್ರಾಮಗಳ ವ್ಯವಸ್ಥೆಯನ್ನು ರಾಜ್ಯ ಎಂದು ಅರ್ಥೈಯಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರಾಷ್ಟ್ರ ಎಂಬುದು ಕೇವಲ ಒಂದು ಭೌತಿಕ ಸಂಘಟನೆಯ ಮೇಲೆ ಅವಲಂಬಿತವಾಗಿರದೆ. ಆ ರಾಷ್ಟ್ರದಲ್ಲಿನ ಜನತೆಯ ಮಾನಸಿಕ ಸಂಘಟನೆಯ ಮೇಲೆ ಅವಲಂಬಿತವಾಗಿರುತ್ತದೆ. ಎಂಬ ಅವರ ವ್ಯಾಖ್ಯಾನದ ಪುನರುಚ್ಚಾರವೇ ಅಂಬೇಡ್ಕರ್ ಅವರ ರಾಷ್ಟ್ರದ ಅರ್ಥವೂ ಆಗಿದೆ.

ಅಂಬೇಡ್ಕರ್ ಅವರ ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಚಿಂತನೆಯು ಕೇವಲ ಭೌತಿಕ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡುವುದಕ್ಕಿಂತ ಹೆಚ್ಚಾಗಿ ಸಮಾಜದಲ್ಲಿನ ಮಾನಸಿಕ ಸಮಾನತೆಯನ್ನು ಅಥವಾ ಸಂತೃಪ್ತಿಯನ್ನು ಸೃಷ್ಟಿಸುವ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವಗಳಂತಹ ಮಾನವ ಪರ ಮತ್ತು ತಾತ್ವಿಕ ಅಂಶಗಳನ್ನು ಪ್ರಾಯೋಗಿಕವಾಗಿ ಅಚರಣೆಯಲ್ಲಿ ತರುವುದನ್ನು ಹೆಚ್ಚಾಗಿ ಕೇಂದ್ರಿಕೃತಗೊಂಡಿದೆ. ಏಕೆಂದರೆ, ಅಂಬೇಡ್ಕರ್ ಅವರು ಹೇಳುವಂತೆ ಕೇವಲ ಪರಮಾಧಿಕಾರವನ್ನು ಹೊಂದಿರುವ ಸಂಸ್ಥೆ ಅಥವಾ ಸಂಘಟನೆ ಮಾತ್ರ ರಾಜ್ಯವಾಗಲಾರದು. ಅದನ್ನು ಒಂದು ಸಂಘಟನೆ ಎಂದು ಕರೆಯಬೇಕಾದರೆ, ಅದು ಪರಮಾಧಿಕಾರದ ಜೊತೆಗೆ ಸಮಗ್ರ ಸ್ವಾತಂತ್ರ್ಯ, ಸಮಾನತೆ ಹಾಗೂ ಶೋಷಣೆರಹಿತವಾದ ಮುಕ್ತ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರಬೇಕು ಎಂಬುದು ಅವರ ಚಿಂತನೆಯ ಮೂಲ ತಿರುಳಾಗಿದ್ದು, ಅದಕ್ಕೆ ಪೂರಕ ಸಾಮಾಜಿಕ ಪ್ರಜೆಯಿಂದ ರೂಪಿತವಾದ ಸಂಸ್ಥೆ ಎಂಬ ಅಭಿಪ್ರಾಯವನ್ನು ಬಲವಾಗಿ ಪ್ರತಿಪಾದಿಸುತ್ತಾರೆ.

**ರಾಷ್ಟ್ರ ನಿರ್ಮಾಣದ ಪರಿಕಲ್ಪನೆ**

ಒಂದು ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯು ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಆಧರಿಸಿವೆ. ರಾಷ್ಟ್ರ ಮತ್ತು ರಾಷ್ಟ್ರೀಯತೆ ಎನ್ನುವುದು ಒಂದು ಮಾನಸಿಕ ಭಾವನೆ. ಸ್ವತಂತ್ರ್ಯ, ಏಕತೆ ತಾವೆಲ್ಲ ಒಂದು ಎನ್ನುವ ಭಾವಪರವಶತೆಯೇ ರಾಷ್ಟ್ರೀಯವಾದ. ಇದರಲ್ಲಿ ತ್ಯಾಗಭಾವನೆ, ರಾಷ್ಟ್ರಾಭಿಮಾನ ಅಡಕವಾಗಿರುತ್ತದೆ. ನಾವೆಲ್ಲರೂ ಒಂದು ಎಂಬ ಭಾವನೆ ಬೆಳೆದ ಮೇಲೆಯೇ ರಾಷ್ಟ್ರ ರೂಪುಗೊಳ್ಳುವುದು. ಅಂದರೆ, ರಾಷ್ಟ್ರೀಯತೆಯ ನಂತರವೇ ರಾಷ್ಟ್ರ ಎನ್ನುವುದು ನಿರ್ಮಾಣವಾಗುವುದು. ತಾವೆಲ್ಲಾ ಒಂದು ಎಂಬ ಭಾವನೆಯಿಂದ ಒಂದು ಜನಾಂಗ, ಸಮುದಾಯ, ನಂತರ ರಾಜಕೀಯ ಸಂಘಟನೆ ಆಮೇಲೆ ರಾಷ್ಟ್ರ ಎನ್ನುವುದು ನಿರ್ಮಾಣವಾಗುತ್ತದೆ. ಅಂಬೇಡ್ಕರ್ ಅವರ ರಾಷ್ಟ್ರದ ಪರಿಕಲ್ಪನೆಯು ಈ ಮೌಲ್ಯಗಳ ಪ್ರತಿರೂಪವಾಗಿತ್ತು. ಏಕೆಂದರೆ ಭಾರತೀಯ ಸಮಾಜದಲ್ಲಿ ತಾವೆಲ್ಲ ಒಂದು ಎನ್ನುವ ಯಾವ ಭಾವನೆಗಳು

ಇಲ್ಲದೆ ಸಾವಿರಾರು ವರ್ಷಗಳ ಅಸಮಾನತೆಯ ಸ್ವಾತಂತ್ರ್ಯರಹಿತ ಜನರ ಮೂಖರೋಧನೆಯ ಸಮಾಜದ ಅಂತ್ಯವೇ ಅಂಬೇಡ್ಕರ್ ಅವರ ರಾಷ್ಟ್ರನಿರ್ಮಾಣದ ಮೊದಲ ಆಧ್ಯತೆಯಾಗಿತ್ತು.

ಅಂಬೇಡ್ಕರ್ ಅವರ 'ರಾಷ್ಟ್ರ' ಎನ್ನುವ ಒಟ್ಟು ಅರ್ಥವು ಸಾಮಾಜಿಕ ವ್ಯವಸ್ಥೆಯಿಂದ ನಿರ್ಧರಿತವಾಗುತ್ತದೆ ಎಂಬುವ ವಾಸ್ತವ ಸತ್ಯವನ್ನು ಗುರುತಿಸಿದವರು ಅವರು. ಅಭಿಪ್ರಾಯವನ್ನು ಭಾರತೀಯ ಸಾಮಾಜಕ್ಕೆ ಅನ್ವಯಿಸುತ್ತಾ ಸಮಾಜದಲ್ಲಿನ ಅಂತ್ಯಜರೆನಿಸಿದ ವರ್ಣವ್ಯವಸ್ಥೆಯಲ್ಲಿನ ಅತ್ಯಂತ ಕೆಳಗಿನ ವರ್ಣದವರಾಗಿದ್ದು ಅಸ್ಪೃಶ್ಯರು ಶೋಷಣೆಯಿಂದ ವಿಮುಕ್ತಿಯಿಲ್ಲದ ಬ್ರಿಟಿಷರಿಂದ ಪಡೆದ ಸ್ವಾತಂತ್ರ್ಯವು ಭಾರತವನ್ನು ಒಂದು ನೈಜ ರಾಷ್ಟ್ರವನ್ನಾಗಿ ನಿರ್ಮಿಸುವಲ್ಲಿ ವಿಫಲವಾಗುತ್ತಿದೆ ಎಂದು ವಿವರಿಸಿ ಒಂದು ಸಮುಷ್ಠಿ ಸಮಾಜದಿಂದ ಮಾತ್ರ 'ರಾಷ್ಟ್ರ'ದ ನಿರ್ಮಾಣ ಸಾಧ್ಯ ಎಂಬ ವೈಜ್ಞಾನಿಕ ಅರ್ಥವನ್ನು ಅಂಬೇಡ್ಕರ್ ನೀಡಿದರು.

ಅಂಬೇಡ್ಕರ್ ಅವರು ತಮ್ಮ ಮುಂದುವರಿಸುತ್ತಾ, ಭಾರತದಲ್ಲಿನ ವರ್ಣವ್ಯವಸ್ಥೆ ವೇದಗಳ ಕಾಲದಿಂದ ಯಾವ ರೀತಿ ಬೆಳೆದು ಬಂದಿದೆ ಎಂಬುದನ್ನು ವಿವರಿಸಿದ್ದು ವರ್ಣವ್ಯವಸ್ಥೆಯ ಆಚರಣೆಯು ಕೆಳಸಮುದಾಯವನ್ನು ಯಾವ ರೀತಿಯಲ್ಲಿ ಶೋಷಣೆಗೆ ಗುರಿಪಡಿಸಿದೆ ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಇದರಲ್ಲಿ ಅವರು ಪ್ರಮುಖವಾಗಿ ಶೂದ್ರರನ್ನು ಮೇಲ್ವರ್ಗದ ಸಮುದಾಯ ಅದರಲ್ಲಿಯು ಪ್ರಮುಖವಾಗಿ ಬ್ರಾಹ್ಮಣ ಮತ್ತು ಕ್ಷತ್ರಿಯ ವರ್ಗಗಳು ಯಾವ ರೀತಿ ಬಳಸಿಕೊಂಡರು. ನಂತರ ವರ್ಣ ವ್ಯವಸ್ಥೆ ರಾಜ್ಯದ ದೈನಂದಿನ ಚಟುವಟಿಕೆಗಳೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದಿತ್ತು ಎಂಬುದನ್ನು ವಿವರಿಸಿರುವ ಅಂಬೇಡ್ಕರ್ ವರ್ಣವ್ಯವಸ್ಥೆಯ ಆಚರಣೆ ಯಥಾವತ್ತಾಗಿ ಮುಂದುವರೆದರೆ ಭಾರತ ಸ್ವಾತಂತ್ರ್ಯ ಪಡೆದರೂ ಕೂಡ ಒಂದು ನ್ಯಾಯಸಮ್ಮತವಾದ ರಾಷ್ಟ್ರ ಎಂದು ಕರೆಯಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

ಒಂದು 'ರಾಷ್ಟ್ರ' ನಿರ್ಮಾಣದಲ್ಲಿ ಭಾಷೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ಸಮಗ್ರವಾಗಿ ವಿಶ್ಲೇಷಿಸಿದ್ದಾರೆ. ಭಾರತದಲ್ಲಿರುವ ವಿವಿಧ ಭಾಷೆಗಳು ಭಾರತದ ಏಕತೆಗೆ ಧಕ್ಕೆಯನ್ನು ತರುವ ಸಾಧ್ಯತೆ ಇದೆ ಎಂದು ವಿವರಿಸಿದ ಅಂಬೇಡ್ಕರ್ ಅವರು ಭಾರತದಲ್ಲಿನ ಹಿಂದಿ ಭಾಷೆಯನ್ನು ಒಂದು ರಾಷ್ಟ್ರ ಭಾಷೆಯನ್ನಾಗಿ ಸ್ವೀಕರಿಸಬೇಕೆಂಬ ನಿಲುವನ್ನು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಭಾಷಾವಾರು ಪ್ರಾಂತ್ಯಗಳ ರಚನೆಯ ಬಗ್ಗೆ ಸಹಮತ ವ್ಯಕ್ತಪಡಿಸಿರುವ ಅವರು ಭಾಷೆಗಳ ಆಧಾರದ ಮೇಲೆ ಪ್ರಾಂತ್ಯಗಳನ್ನು ರಚಿಸಿದರೂ ಕೂಡ ಅವುಗಳು ಬಲಿಷ್ಠ ಕೇಂದ್ರ ಸರ್ಕಾರದಡಿಯಲ್ಲಿ ಕಾರ್ಯನಿರ್ವಹಿಸು ವಂತಿರಬೇಕು ಎಂದಿದ್ದಾರೆ.

‘ರಾಷ್ಟ್ರ’ ಅಥವಾ ನಿರ್ಮಾಣದಲ್ಲಿ ‘ಶೋಷಣೆ’ ರಹಿತವಾದಂತಹ ಸಾಮಾಜಿಕ ರಾಜಕೀಯ ವಾತಾವರಣದ ನಿರ್ಮಾಣದತ್ತ ಹೋರಾಟ ನಡೆಸಿದರು. ಅದಕ್ಕಾಗಿ ಅವರು ಕಾಂಗ್ರೆಸ್ ನಾಯಕರ ದೃಷ್ಟಿಯಲ್ಲಿ ಬ್ರಿಟಿಷರ ಪರವಾದಿ ಎನ್ನುವ ಆರೋಪಕ್ಕೆ ಗುರಿಯಾದರು. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ನಾಯಕರುಗಳ ಹೋರಾಟದ ಮುಖ್ಯ ಗುರಿ ರಾಜಕೀಯ ಶೋಷಣೆಯಿಂದ ಮುಕ್ತಿಯನ್ನು ಪಡೆಯುವುದೇ ಆಗಿತ್ತು. ಈ ಹೋರಾಟಕ್ಕೆ ಪ್ರತಿಕ್ರಿಯಿಸಿದ ಅಂಬೇಡ್ಕರ್ ಅವರು ಶೋಷಣೆ ಎಂದರೆ ಕೇವಲ ರಾಜಕೀಯ ಶೋಷಣೆ ಮಾತ್ರ ಅಲ್ಲ. ಯಾವುದೇ ರೀತಿಯಾದ ಶೋಷಣೆಯಾದರೂ ಅದು ಶೋಷಣೆಯೇ ಆಗಿದ್ದು ಎಲ್ಲಾ ರೀತಿಯ ಶೋಷಣೆಗಳಿಂದ ಮುಕ್ತವಾದ ಸ್ವಾತಂತ್ರ ರಾಷ್ಟ್ರವನ್ನು ಅಂಬೇಡ್ಕರ್ ಅವರು ಬಯಸಿದ್ದರು. ಇದು ಅವರೊಬ್ಬ ಆಧುನಿಕ ‘ರಾಷ್ಟ್ರದ ಕರ್ತೃ’ ಎಂಬುದಕ್ಕೆ ಒಂದು ಉದಾಹರಣೆಯಾಗಿದೆ.

ಅಂಬೇಡ್ಕರ್ ಅವರು ಒಬ್ಬ ನಿಷ್ಠಾವಂತ ರಾಷ್ಟ್ರಾಭಿಮಾನಿಯಾಗಿದ್ದುದರಿಂದಲೇ ಭಾರತದಲ್ಲಿನ ಸಮಗ್ರ ರೀತಿಯ ಬದಲಾವಣೆಗಾಗಿ ಬಯಸಿದರಷ್ಟೇ ಅಲ್ಲ, ಅದಕ್ಕೆ ಪೂರಕವಾಗಿ ತಮ್ಮ ಇಡೀ ಬದುಕನ್ನು ಮುಡುಪಾಗಿಟ್ಟರು. ಪ್ರಮುಖವಾಗಿ ಭಾರತದಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಆಚರಣೆಯಲ್ಲಿರುವ ಅಸಮಾನತೆಗಳ ಮೂಲ ಮತ್ತು ಅವುಗಳನ್ನು ಹೋಗಲಾಡಿಸಲು ಅಂಬೇಡ್ಕರ್ ಅವರು ಕೈಗೊಂಡ ಚಿಂತನ ಕ್ರಮಗಳು. ಅದಕ್ಕೆ ಪ್ರತಿಯಾಗಿ ಎದುರಿಸಿದ ಪ್ರತಿರೋಧಗಳನ್ನು ಸಮಗ್ರವಾಗಿ ವಿಶ್ಲೇಷಿಸಲಾಗಿದ್ದು, ಅವರ ಚಿಂತನೆಗಳು ಭಾರತವನ್ನು ಒಂದು ಸದೃಢ ರಾಷ್ಟ್ರವನ್ನಾಗಿ ರೂಪಿಸುವಲ್ಲಿ ಯಾವ ರೀತಿ ಸಹಕಾರಿಯಾಗಿದೆ ಎಂಬುದು ಚರ್ಚಿಸಿದ್ದಾರೆ. ಒಂದು ಸದೃಢ ರಾಷ್ಟ್ರ ನಿರ್ಮಾಣದಲ್ಲಿ ಅಂಬೇಡ್ಕರ್ ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿದೆ. ಆದರೆ ಅವುಗಳನ್ನು ಜಾರಿಗೊಳಿಸುವಲ್ಲಿ ಭಾರತೀಯ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆ ತೊಡಕಾಗಿದೆ ಎಂಬುದನ್ನು ಕೂಡ ಅವರು ಮೊದಲೇ ತಮ್ಮ ಗ್ರಂಥಗಳಲ್ಲಿ ಚರ್ಚಿಸಿದ್ದಾರೆ.

‘ರಾಷ್ಟ್ರ’ದಲ್ಲಿನ ರಚನೆಯಲ್ಲಿ ಸ್ವಾತಂತ್ರ, ಸಮಾನತೆ ಬಹುಮುಖ್ಯವಾದುದ್ದು. ಲಿಂಗ ಅಸಮಾನತೆಯನ್ನು ತೊಡೆದು ಹಾಕುವಲ್ಲಿ ಬ್ರಿಟೀಷ್ ಆಡಳಿತವು ವಿಫಲಗೊಂಡಿತ್ತು ಎಂದು ವಿವರಿಸಿದ ಅಂಬೇಡ್ಕರ್ ಪ್ರಾಚೀನ ಭಾರತದಿಂದ ಪ್ರಸ್ತುತದವರೆಗೆ ಭಾರತದಲ್ಲಿನ ಮಹಿಳೆಯರ ಸ್ಥಾನಮಾನಗಳು ಯಾವ ರೀತಿಯ ಸ್ಥಿತ್ಯಾಂತರಗಳನ್ನು ಕಂಡಿವೆ ಎಂಬುದನ್ನು ವಿಶ್ಲೇಷಿಸಿತ್ತು. ಮಹಿಳಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿದು ರೂಢಿ ಸಂಪ್ರದಾಯಗಳ ಆಚರಣೆಗಳು ವಿರೋಧಿಸಿ ಸಮಾನತೆಯ ಸಮಾಜವುಳ್ಳ ರಾಷ್ಟ್ರವನ್ನು ನಿರ್ಮಿಸುವ ಪ್ರಬುದ್ಧ ವಿಚಾರಣೆಗಳನ್ನು ವಿವರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಿಳಾ ಸಂಘಟನೆಗಳ ರಚನೆ ಅವರ ಸ್ವಾತಂತ್ರ್ಯದ ಅರಿವನ್ನು ಮೂಡಿಸುವಲ್ಲಿನ ಅವರ ಹೋರಾಟಗಳು ಅವಿಸ್ಮರಣೀಯ ಅಂತೆಯೇ ಸಂವಿಧಾನಾತ್ಮಕ

ಭರವಸೆಗಳಿಂದ ಅವರ ಹೋರಾಟಕ್ಕೆ ಒಂದು ನೆಲೆಯನ್ನು ಕಲ್ಪಿಸಿಕೊಟ್ಟರು. ಇದು ಅಂಬೇಡ್ಕರ್ ಅವರು 'ರಾಷ್ಟ್ರ' ರಚನೆಯ ಹಿನ್ನೆಲೆಯಲ್ಲಿ ಗುರುತಿಸಿಕೊಟ್ಟ ಅತ್ಯಂತ ಪ್ರಮುಖ ಅಂಶಗಳಲ್ಲಿ ಒಂದಾಗಿದೆ.

ಮೂಲಭೂತ ಹಕ್ಕುಗಳು, ರಾಜ್ಯ ನೀತಿ ನಿರ್ದೇಶಕ ತತ್ವಗಳು ಹೇಗೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಸಾಧಿಸುವಲ್ಲಿ ಅವರು ನೆರವಾಗಲಿವೆ ಎಂಬುದನ್ನೇ ಅರಿತ ಅಂಬೇಡ್ಕರ್ ಸಂವಿಧಾನದ 32ನೇ ವಿಧಿಯಲ್ಲಿ ಅವುಗಳನ್ನು ಸವಿವರವಾಗಿ ವಿಶ್ಲೇಷಿಸಿದ್ದಾರೆ. ಭಾರತವನ್ನು ಒಂದು ಅರ್ಥಪೂರ್ಣ ಹಾಗೂ ಪರಿಪೂರ್ಣ ರಾಷ್ಟ್ರವನ್ನಾಗಿ ರೂಢಿಸುವ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರು ಯಾವ ರೀತಿಯ ನಿರಂತರ ಹೋರಾಟವನ್ನು ಗುರುತಿಸುವ ಸಂವಿಧಾನ ರಚನೆಯು ಮಹತ್ತರವಾದ ಮೈಲಿಗಲ್ಲಾಗಿದೆ ಎಂಬುದನ್ನು ಇಲ್ಲಿ ನೆನಪಿಸಿ ಕೊಳ್ಳಬೇಕಾಗಿದೆ. ಅತ್ಯುತ್ತಮ ಸಂವಿಧಾನವು ಒಂದು ಪ್ರಭುದ್ಧ 'ರಾಷ್ಟ್ರ'ವನ್ನು ರೂಪಿಸುವುದು ಮತ್ತು ಅದನ್ನು ನಿರಂತರವಾಗಿ ನಡೆಸುವುದರಲ್ಲಿ ಮಹತ್ತರ ಹೆಜ್ಜೆಯಾಗಿದೆ ಎಂಬುದನ್ನು ಅಂಬೇಡ್ಕರ್ ಅವರು ಸಂವಿಧಾನದ ಪಿತೃವಾಗಿ ಸಾದರ ಪಡಿಸಿದ್ದಾರೆ.

**ರಾಷ್ಟ್ರೀಯತೆಯ ಪರಿಕಲ್ಪನೆ**

ರಾಷ್ಟ್ರೀಯತೆ ಎನ್ನುವುದು ಒಂದೇ ಭಾಷೆ, ಒಂದೇ ಸಂಸ್ಕೃತಿ, ಒಂದೇ ಬುಡಕಟ್ಟು, ಒಂದೇ ಧರ್ಮ, ಇತಿಹಾಸ, ರಾಜಕೀಯ ಅಭಿಪ್ರಾಯದ ಐಕ್ಯತೆ ಇವುಗಳ ಸಂಗಮ. ಆದರೆ ಆಧುನಿಕ ರಾಷ್ಟ್ರಗಳಿಂದ ಇದನ್ನು ನಿರೀಕ್ಷಿಸಲಾಗದು. ಏಕೆಂದರೆ, ವಿಭಿನ್ನ ಭಾಷೆ ಸಂಸ್ಕೃತಿ, ಜನಾಂಗಗಳಿಂದ ಕೂಡಿದೆ. ರಾಷ್ಟ್ರೀಯತೆ ಎನ್ನುವುದು ಮಾನಸಿಕ ಭಾವನೆಯಾಗಿದ್ದರಿಂದ ಪರಸ್ಪರ ಗೌರವ, ಸಹಬಾಳ್ವೆಯಿಂದ ಇವುಗಳನ್ನು ಸ್ಥಾಪಿಸಬಹುದಾಗಿದೆ. ಆದರೆ ಭಾರತೀಯ ಸಮಾಜದಲ್ಲಿ ಈ ಭಾವನೆಗಳು ತಮ್ಮ ಸ್ವರೂಪವನ್ನು ಕಳೆದುಕೊಂಡಿವೆ ಎನ್ನುವ ವಾಸ್ತವ ಸತ್ಯವನ್ನು ಕಂಡುಹಿಡಿದು ಅವುಗಳನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಬಲವಾದ ಹೋರಾಟವನ್ನು ಕೈಗೊಂಡ ಅಂಬೇಡ್ಕರ್ ಅವರು ಒಬ್ಬ ನೈಜ ರಾಷ್ಟ್ರೀಯವಾದಿ ಎನ್ನುವುದರಲ್ಲಿ ಎರಡನೇ ಮಾತಿಲ್ಲ.

ರಾಷ್ಟ್ರೀಯತೆಯು ಜನರಲ್ಲಿನ ಒಂದು ಮಾನಸಿಕ ಭಾವನೆಯಾಗಿದ್ದು, ಅದು ರಾಷ್ಟ್ರದ ಹಿತಕ್ಕಾಗಿ ದುಡಿಯಲು ಸುಸಂಘಟಿತರಾಗಿ ಹಾಗೂ ಕಂಕಣಬದ್ಧರಾಗಿ ಹೋರಾಟ ನಡೆಸುವಂತಹ ಆತ್ಮಬಲವೇ ರಾಷ್ಟ್ರೀಯವಾದ. ಇದೊಂದು ಹೃದಯದ ಮಾತು. ಚಾಲಕ ಶಕ್ತಿ. ಜನರಲ್ಲಿ ತನ್ನ ರಾಷ್ಟ್ರ, ತನ್ನ ಸರ್ಕಾರ, ಕಾನೂನು ಎನ್ನುವ ಗೌರವ ಪ್ರಜ್ಞೆ ಮೂಡಿ ಆಡಳಿತಕ್ಕೆ ಬೆಂಬಲದ ಭುಜ ನೀಡುವುದೇ ರಾಷ್ಟ್ರೀಯವಾದದ ಮೂಲ ತತ್ವ. ಇದು ಸಕಾರಾತ್ಮಾಕ ಮತ್ತು ನಕಾರಾತ್ಮಕ ಎಂಬ ಎರಡು ಮುಖಗಳನ್ನು ಹೊಂದಿದ್ದು, ಸಕಾರಾತ್ಮಕವಾಗಿದ್ದಲ್ಲಿ ಆರೋಗ್ಯಕರವಾದ ರಾಷ್ಟ್ರವನ್ನು, ನಕಾರಾತ್ಮಾಕವಾಗಿದ್ದಲ್ಲಿ ಅನಾರೋಗ್ಯಕರವಾದ ಭಾವಾವೇಶದ ರಾಷ್ಟ್ರವನ್ನು ನಿರ್ಮಿಸಬಲ್ಲದು. ಹಿಟ್ಲರ್, ಮುಸಲೋನಿಯಂತಹವರು ಉಗ್ರರಾಷ್ಟ್ರೀಯತೆಯ

ಪ್ರತಿಪಾದಕರೆನ್ನಬಹುದು. ಆದ್ದರಿಂದ ಅಂಬೇಡ್ಕರ್, ಅವರು ಭಾರತವು ಆರೋಗ್ಯಕರವಾದ ವಾತಾವರಣವುಳ್ಳ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವವೆಂಬ ತ್ರಿರತ್ನದ ಆಧಾರಿತವಾದ ಪ್ರಭುದ್ಧ ಭಾರತದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಜನರು ಬೆಳೆಸುವ ರಾಷ್ಟ್ರದ ನಿರ್ಮಾಣವನ್ನು ಬಯಸಿದರು.

ರಾಷ್ಟ್ರೀಯತೆ ಎಂಬುದು ಒಂದು ಆಧುನಿಕ ಪರಿಕಲ್ಪನೆ ಎಂದು ಗ್ರಹಿಸಿದ ಕೆಲವೇ ಭಾರತೀಯ ವಿದ್ವಾಂಸರಲ್ಲಿ ಅಂಬೇಡ್ಕರ್ ಅವರು ಒಬ್ಬರು. ಏಕೆಂದರೆ ಭಾರತ ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ಭಾರತ ರಾಜಕೀಯವಾಗಿ ಹಾಗೂ ಸಂವಿಧಾನಾತ್ಮಕವಾಗಿ ಸಬಲೀಕರಣಗೊಳ್ಳಬೇಕು ಎಂದು ಪ್ರತಿಪಾದಿಸಿದವರು ಒಂದು ಗುಂಪಾದರೆ, ಭಾರತ ಸಾಮಾಜಿಕ ಹಾಗೂ ಆರ್ಥಿಕ ಸುಧಾರಣೆಗಳನನಾಧರಿಸಿದ ಜನತಾಂತ್ರಿಕತೆಯ ಮೇಲೆ ಅವಲಂಬಿತವಾಗಿರ ಬೇಕೆಂಬುದು ಮತ್ತೊಂದು ಗುಂಪಿನವಾದ. ಇದರಲ್ಲಿ ಅಂಬೇಡ್ಕರ್ ಅವರು ಭಾರತ ಒಂದು ಆಧುನಿಕ ರಾಷ್ಟ್ರವಾಗಿ ರೂಪುಗೊಳ್ಳುವ ಮೊದಲು ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಸಮಾನತೆಗಳನ್ನು ಒಳಗೊಂಡ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ 'ರಾಷ್ಟ್ರದ' ನಿರ್ಮಾಣಕ್ಕಾಗಿ ಪ್ರಬಲವಾಗಿ ಸಮರ್ಥನೆ ಮಾಡಿ ಸಮಾಜಮುಖಿಯಾದ ರಾಷ್ಟ್ರೀಯತಾವಾದವನ್ನು ಅಂಬೇಡ್ಕರ್ ಅವರು ತಮ್ಮ ಅಖಂಡವಾದ ಭಾಷಣಗಳಲ್ಲಿ ಪ್ರತಿಪಾದಿಸಿದ್ದಾರೆ.

ಭಾರತೀಯ ಸಾಂಸ್ಕೃತಿಕ ಏಕತೆಯ ಬಗ್ಗೆ ಅಪಾರವಾದ ಗೌರವನ್ನು ಹೊಂದಿದ್ದ ಅಂಬೇಡ್ಕರ್ ಅವರು ರಾಷ್ಟ್ರೀಯತೆ ಎಂಬುದು ಜನಾಂಗೀಯ ವೈಶಮ್ಯಗಳನ್ನು ಮೀರಿ ನಿಲ್ಲುವಂತಹದ್ದಾಗಿದ್ದರೂ ಕೂಡ ಭಾರತದಲ್ಲಿ ಆಚರಣೆಯಲ್ಲಿರುವ ಸಾಮಾಜಿಕ ಅಸಮಾನತೆ ಒಂದು ಅಮಾನವೀಯ ಪ್ರಕ್ರಿಯೆಯಾಗಿದ್ದು, ಇಂತಹ ಸನ್ನಿವೇಶದಲ್ಲಿ ಯಾವುದೇ ಒಬ್ಬ ಅಸ್ಪೃಶ್ಯ ತಾನೊಬ್ಬ ಭಾರತೀಯನೆಂದು ಹೇಳಿಕೊಳ್ಳಲು ಅಸಾಧ್ಯ ಎಂಬುದು ಅಂಬೇಡ್ಕರ್ ಅವರ ವಾದವಾಗಿತ್ತು. ಏಕೆಂದರೆ, ಕೇವಲ ರಾಜಕೀಯ ಏಕತೆ ಅಥವಾ ಸ್ವಾತಂತ್ರ ಹೆಚ್ಚು ಕಾಲ ಉಳಿಯಬೇಕಾದರೆ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಸಮಾನತೆಗಳನ್ನು ತಂದರೆ ಮಾತ್ರ ಸಾಧ್ಯ. ಇಲ್ಲವಾದಲ್ಲಿ ಭಾರತ ಒಂದು ರಾಷ್ಟ್ರವಾಗಿ ಹೆಚ್ಚು ಕಾಲ ಉಳಿಯುವುದು ಅಸಾಧ್ಯದ ಸಂಗತಿ ಎಂದು ತಿಳಿಸಿದ ಅವರು ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಇಲ್ಲದ ರಾಜಕೀಯ ವ್ಯವಸ್ಥೆ ಮಾತ್ರ ಆಗಬಲ್ಲದೆ ಹೊರತು ಪ್ರಜಾಸತ್ತಾತ್ಮಕ ರಾಷ್ಟ್ರವಾಗಲಾರದು.

ಭಾರತದ ಅರ್ಥಪೂರ್ಣ ರಾಷ್ಟ್ರೀಯತೆಗೆ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಾನತೆಗಳ ಒಂದು ರೀತಿಯ ಅಡಿಗಲ್ಲುಗಳಾಗಿ ರೂಪುಗೊಳ್ಳಬೇಕು ಎಂಬುದರ ಬಗ್ಗೆ ಅಂಬೇಡ್ಕರ್ ಚಿಂತನೆಗಳ ವಿವರಿಸುತ್ತಾರೆ. ಅಂಬೇಡ್ಕರ್ ಸ್ವತಃ ಉನ್ನತ ಶಿಕ್ಷಣದಲ್ಲಿ ಮಹತ್ವ ಸಾಧನೆಗೈದರಲ್ಲದೆ, ಅದರ ಮಹತ್ವವನ್ನು ಹಾಗೂ ಅಗತ್ಯತೆಯನ್ನು ಕೂಡ ಒತ್ತಿ ಹೇಳಿದ್ದಾರೆ. ಅಂಬೇಡ್ಕರ್ ಅವರ ಪ್ರಕಾರ ಶಿಕ್ಷಣದಿಂದ ಅತ್ಯುತ್ತಮ ಪ್ರಜೆಗಳನ್ನು

ರೂಪಿಸಬಹುದು, ಸಮಾಜದ ಆರೋಗ್ಯವನ್ನು ಕಾಪಾಡಲು ಶಿಕ್ಷಣವು ಅತ್ಯಂತ ಮುಖ್ಯವಾದ ಘಟ್ಟ. ಅಷ್ಟೆ ಅಲ್ಲದೆ ಶಿಕ್ಷಣದಿಂದ ಹೋರಾಟ, ಹೋರಾಟದಿಂದ ಬದಲಾವಣೆ, ಬದಲಾವಣೆಯಿಂದ ಉತ್ತಮ ಸಮಾಜ, ರಾಜ್ಯ, ರಾಷ್ಟ್ರ ನಿರ್ಮಾಣ ಸಾಧ್ಯ ಎನ್ನುವ ಆಶೆಯವು ಅವರದ್ದಾಗಿತ್ತು.

**ಅಂಬೇಡ್ಕರ್ ಅವರ ನಿಲುವು**

ಅಂಬೇಡ್ಕರ್ ಅವರು ಒಬ್ಬ ನೈಜ ಪ್ರಜಾಪ್ರಭುತ್ವವಾದಿಯಾಗಿದ್ದು, ರಾಷ್ಟ್ರೀಯತೆಯನ್ನು ಬೆಳೆಸುವಲ್ಲಿ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಉದಾರವಾದಿ ಪ್ರಜಾಪ್ರಭುತ್ವ ಹೆಚ್ಚು ಸಹಕಾರಿಯಾಗಬಲ್ಲದು ಎಂದು ಪ್ರತಿಪಾದಿಸುತ್ತಾರೆ. ಏಕೆಂದರೆ, ಉದಾರವಾದಿ ಪರಿಕಲ್ಪನೆಯೂ ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಗೆ ಎಲ್ಲಾ ಕ್ಷೇತ್ರಗಳಲ್ಲಿ ಮುಕ್ತವಾಗಿ ಭಾಗವಹಿಸುವ ಅವಕಾಶವನ್ನು ಕಲ್ಪಿಸುವ ಮೂಲಕ ಪ್ರತಿಯೊಬ್ಬ ವ್ಯಕ್ತಿಯನ್ನು ಸಬಲೀಕರಣಗೊಳಿಸುವಲ್ಲಿ ಸಹಕಾರಿಯಾಗುತ್ತದೆ ಎಂಬ ಚಿಂತನೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ಅಂಬೇಡ್ಕರ್ ಅವರ ಪ್ರಕಾರ 'ರಾಷ್ಟ್ರ' ಎಂದರೆ ಕೇವಲ ಭೂಪ್ರದೇಶ, ಜನಸಂಖ್ಯೆ, ಪರಮಾಧಿಕಾರಿಗಳನ್ನೊಳಗೊಂಡ ಸಂಘಟನಾತ್ಮಕ ವ್ಯವಸ್ಥೆಯ ಜೊತೆಗೆ ಆ ರಾಷ್ಟ್ರದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಅರ್ಥಪೂರ್ಣ ಸಬಲೀಕರಣ ಪ್ರಕ್ರಿಯೆಯೇ ನೈಜವಾದ ರಾಷ್ಟ್ರವಾಗಿದೆ.

ಅಂಬೇಡ್ಕರ್ ಅವರ ರಾಷ್ಟ್ರೀಯತೆಯ ಚಿಂತನೆ ಬೇರೆಯವರ ರಾಷ್ಟ್ರೀಯತೆಯ ಚಿಂತನೆಗಿಂತ ಭಿನ್ನವಾಗಿಯೇ ರೂಪುಗೊಂಡಿದೆ. ಇವರ ರಾಷ್ಟ್ರೀಯತೆಯ ಚಿಂತನೆಯು ಪ್ರಧಾನವಾಗಿ ಶೋಷಣೆಗೆ ಅಥವಾ ತುಳಿತಕ್ಕೆ ಒಳಗಾದ ಜನತೆಯ ಕಲ್ಯಾಣದ ಕೇಂದ್ರೀಕೃತ ಚಿಂತನೆಯಾಗಿದ್ದು, ತುಳಿತಕ್ಕೆ ಒಳಗಾದ ಜನತೆಗಳ ಅಗತ್ಯವಿರುವ ಸಮಾನತೆ ಹಾಗೂ ನಾಗರೀಕ ಹಕ್ಕುಗಳನ್ನು ದೊರಕಿಸಿಕೊಡಬೇಕಾದ ಜವಾಬ್ದಾರಿ ಹಾಗೂ ಹೊಣೆಗಾರಿಕೆ ರಾಷ್ಟ್ರದ ಕರ್ತವ್ಯವಾಗಿದೆ ಎಂದಿದ್ದಾರೆ. ಅವರ ಪ್ರಕಾರ ರಾಷ್ಟ್ರೀಯತೆ ಎಂದರೆ ಒಂದು ರಾಷ್ಟ್ರದ ರಕ್ಷಣೆಗಾಗಿ ಬಾಹ್ಯ ಆತಂಕಗಳ ವಿರುದ್ಧ ಹೋರಾಟ ಮಾಡುವುದು ಮಾತ್ರವಲ್ಲ. ಅದಕ್ಕೆ ಪ್ರತಿಯಾಗಿ ರಾಷ್ಟ್ರದ ಒಳಗೆಯೇ ಆಂತರಿಕವಾಗಿ ಜನತೆಯ ಹಕ್ಕುಗಳನ್ನು ಮೊಟಕುಗೊಳಿಸುವ ದುಷ್ಟಶಕ್ತಿಗಳ ವಿರುದ್ಧ ಹಾಗೂ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸುವುದು ಕೂಡ ರಾಷ್ಟ್ರೀಯತೆಯ ಒಂದು ಪ್ರಧಾನ ಭಾಗ ಎಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ.

1940ರ ಅವಧಿಯಲ್ಲಿ ಭಾರತದ ರಾಷ್ಟ್ರೀಯತೆಯ ಬಗ್ಗೆ 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗೆ ಬರೆದ ಲೇಖನದಲ್ಲಿ ಅಂಬೇಡ್ಕರ್ ಅವರು ಭಾರತ ಬ್ರಿಟಿಷ್‌ರಿಂದ ರಾಜಕೀಯ ಸ್ವಾತಂತ್ರ ಪಡೆಯುವುದಕ್ಕಿಂತ

ಮೊದಲು ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಬೇಕಾದ ಅಗತ್ಯತೆಯಿದೆ ಎಂದು ಸ್ಪಷ್ಟಪಡಿಸಿದರು. ಇದಕ್ಕೆ ಪೂರಕವಾಗಿ ಮುಂದುವರೆದು ತಿಳಿಸುತ್ತಾ, ರಾಜಕೀಯ ಸ್ವಾತಂತ್ರ್ಯ ಪಡೆಯುವ ಮೂಲಕ ರಾಷ್ಟ್ರದ ಏಕತೆಯನ್ನು ಸಾಧಿಸಬಹುದು ಎಂಬುದು ಕೇವಲ ಒಂದು ಭ್ರಮೆಯಾಗಿದ್ದು, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಅನುಪಸ್ಥಿತಿಯಲ್ಲಿ ರಾಜಕೀಯ ಸ್ವಾತಂತ್ರ್ಯವು ರಾಷ್ಟ್ರ ನಿರ್ಮಾಣ ಪ್ರಕ್ರಿಯೆಯಲ್ಲಿ ಅರ್ಥಹೀನ ಹಾಗೂ ನಿರರ್ಥಕವಾಗಿ ಪರಿಗಣಿಸುತ್ತದೆ ಎಂಬ ನಿಲುವನ್ನು ಪ್ರತಿವಾದಿಸಿದರು. ಬಹುಸಂಸ್ಕೃತಿಯನ್ನು ಹೊಂದಿರುವ ಭಾರತದಂತಹ ರಾಷ್ಟ್ರದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಳನ್ನು ಸಾಧಿಸುವ ಮೂಲಕ ಮಾತ್ರ ರಾಷ್ಟ್ರದ ಏಕತೆಯನ್ನು ಸಾಧಿಸಲು ಸಾಧ್ಯ. ಇಲ್ಲವಾದಲ್ಲಿ ರಾಷ್ಟ್ರದ ಪರಿಕಲ್ಪನೆ ಕೇವಲ ಒಂದು ಕಾಲ್ಪನಿಕವಾಗಿಯೇ ಉಳಿದು ಬಿಡುವ ಸಾಧ್ಯತೆಗಳೇ ಹೆಚ್ಚು ಎಂಬುದನ್ನು ಸ್ಪಷ್ಟಪಡಿಸಿದರು.

ಸಾಂಸ್ಕೃತಿಕ ಏಕತೆಯ ಮೂಲಕ ರಾಷ್ಟ್ರೀಯತೆಯನ್ನು ಸಶಕ್ತಗೊಳಿಸಬಹುದೆಂದು ನಂಬಿದ್ದ ಇವರು ಸಾಂಸ್ಕೃತಿಕ ಏಕತೆಯನ್ನು ಭಾರತದಲ್ಲಿ ತರಲು ಪ್ರಾದೇಶಿಕವಾದ, ಭಾಷಾವಾದ, ಜಾತಿವಾದ, ಕೋಮುವಾದಗಳ ಪ್ರಬಲ ಶತೃಗಳಾಗಿ ಪರಿಣಮಿಸಿವೆ ಎಂದಿದ್ದಾರೆ. ಜಾತಿವಾದವು ರಾಷ್ಟ್ರೀಯತೆಯ ಸ್ಫೂರ್ತಿಯನ್ನೇ ಕೊಲ್ಲುವ ಶಕ್ತಿಯನ್ನು ಹೊಂದಿದ್ದು, ರಾಷ್ಟ್ರದಲ್ಲಿ ಸಾರ್ವಜನಿಕವಾಗಿ ಅಭಿಪ್ರಾಯದ ಮೇಲೆ ತನ್ನ ನಿಯಂತ್ರಣವನ್ನು ಅದು ಸಾಧಿಸಿದೆ. ಆದ್ದರಿಂದ ಜಾತೀಯತೆಯಿಂದ ಇದುವರೆಗೆ ಭಾರತದಲ್ಲಿ ಪಾರದರ್ಶಕವಾದ ಸಾರ್ವಜನಿಕ ಅಭಿಪ್ರಾಯವನ್ನು ಕಾಣಲು ಸಾಧ್ಯವಿಲ್ಲದಾಗಿದೆ. ಜಾತಿವಾದದ ಜೊತೆಗೆ ಕೋಮುವಾದವೂ ಕೂಡ ಭಾರತದ ರಾಷ್ಟ್ರೀಯತೆಯ ನಿರ್ಮಾಣಕ್ಕೆ ಒಂದು ಕಂಠಕಪ್ರಾಯವಾಗಿದ್ದು, ಕೋಮುವಾದ ಜಾತಿವ್ಯವಸ್ಥೆಯ ಆಚರಣೆಯ ಮುಂದುವರೆದ ಭಾಗವೇ ಹೊರತು ಬೇರೆ ಅಲ್ಲ ಎಂದು ಭಾವಿಸಿರುತ್ತಾರೆ. ಜಾತಿವಾದ ಜನತೆಯ ಅಭಿಪ್ರಾಯದ ಮೇಲೆ ನಿಯಂತ್ರಣ ಸಾಧಿಸಿದರೆ, ಕೋಮುವಾದ ಇಡೀ ರಾಷ್ಟ್ರದ ಏಕತೆಗೆ ಒಂದು ಕಂಠಕ ಪ್ರಾಯವಾಗಿದ್ದು, ಜಾತಿವಾದ ಮತ್ತು ಕೋಮುವಾದ ಇವೆರಡನ್ನು ಯಾವುದೇ ಒಂದು ಸಂವಿಧಾನಾತ್ಮಕ ರಾಜಕೀಯ ಪರಿಹಾರಕ್ಕೆ ಬದಲಾಗಿ ಸಾಮಾಜಿಕ ಸಾಮರಸ್ಯದ ಸ್ಥಾಪನೆಯಿಂದ ಮಾತ್ರ ಪರಿಹಾರ ಕ್ರಮವಾಗಬಲ್ಲದು ಎಂಬ ಅಭಿಪ್ರಾಯವನ್ನು ಹೊಂದಿರುತ್ತಾರೆ.

ರಾಷ್ಟ್ರೀಯತೆಯ ಹೆಸರಿನಲ್ಲಿ ಬಹುಸಂಖ್ಯಾತರ ಇಚ್ಚೆಗೆ ತಕ್ಕಂತೆ ಅಸಂಖ್ಯಾತರು ಬದುಕಬೇಕೆಂಬ ಅಘತ್‌ಕಾಲಿಕವಾದ ಒಂದು ರಾಷ್ಟ್ರೀಯ ಪರಿಕಲ್ಪನೆ ಬೆಳೆಯುತ್ತಿದ್ದು ಇದು ಅಪಾಯಕಾರಿ ಬೆಳವಣಿಗೆ ಎಂದು ಎಚ್ಚರಿಸಿದರು. ರಾಷ್ಟ್ರೀಯತೆಯ ಹೆಸರಿನಲ್ಲಿ ಬಹುಸಂಖ್ಯಾತರಿಂದ ನಡೆಯುವ ನಯವಂಚನೆಯನ್ನು ಪ್ರಬಲವಾಗಿ ಖಂಡಿಸಿದ ಇವರು ರಾಷ್ಟ್ರೀಯತೆ ಮತ್ತು ದೇಶಭಕ್ತಿ ಇವೆರಡೂ ಪರಿಕಲ್ಪನೆಗಳು ಸಾಮಾಜಿಕ,

ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಮಾಜಿಕ ಸಮಾನತೆ ಹಾಗೂ ಸ್ವಾತಂತ್ರ್ಯಗಳಿಂದ ಮಾತ್ರ ಉದಯಿಸಲು ಸಾಧ್ಯ ಇಲ್ಲವಾದಲ್ಲಿ ರಾಷ್ಟ್ರೀಯತೆ ಮತ್ತು ರಾಷ್ಟ್ರಭಕ್ತಿ ಇವೆರಡೂ ನೈತಿಕ ಮೌಲ್ಯರಹಿತ ಪರಿಕಲ್ಪನೆಗಳಾಗಿಯೇ ಉಳಿದು ಬಿಡುತ್ತವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಏಕೆಂದರೆ, ರಾಷ್ಟ್ರೀಯತೆ ಎಂಬುದು ಕೇವಲ ಗುಲಾಮರನ್ನು ಅಥವಾ ಶೋಷಣೆಗೆ ಒಳಗಾದವರನ್ನು ವಿಮುಕ್ತಗೊಳಿಸುವುದು ಮಾತ್ರ ಆಗಿರದೆ ರಾಷ್ಟ್ರದಲ್ಲಿನ ಪ್ರತಿಯೊಬ್ಬ ನಾಗರೀಕರ ನಡುವೆ ಸಾಮರಸ್ಯವನ್ನು ಮೂಡಿಸುವುದೇ ರಾಷ್ಟ್ರೀಯತೆಯ ಪ್ರತೀಕ ಎಂದಿದ್ದಾರೆ.

ಅಂಬೇಡ್ಕರ್ ಅವರು ರಾಷ್ಟ್ರ ಅಥವಾ ರಾಷ್ಟ್ರೀಯತೆಯ ಪ್ರಶ್ನೆ ಎದುರಾದಾಗ ರಾಷ್ಟ್ರ ವ್ಯಕ್ತಿಗಿಂತ ಪ್ರಮುಖವಾದುದ್ದಾಗಿದ್ದು, ರಾಷ್ಟ್ರೀಯ ಹಿತಾಸಕ್ತಿ ಮತ್ತು ವ್ಯಕ್ತಿಗತ ಹಿತಾಸಕ್ತಿ ಇವೆರಡೂ ನನಗೆ ಏಕಕಾಲದಲ್ಲಿ ಎದುರಾದರೆ ನಾನು ಮೊದಲ ಆಧ್ಯತೆಯನ್ನು ರಾಷ್ಟ್ರದ ಹಿತಾಸಕ್ತಿಗೆ ನೀಡುತ್ತೇನೆ. ನಂತರದ ಆಧ್ಯತೆಯನ್ನು ತನ್ನ ವೈಯುಕ್ತಿಕ ಹಿತಾಸಕ್ತಿಯ ರಕ್ಷಣೆಗೆ ನೀಡುತ್ತೇನೆ ಎಂದು ಹೇಳುವ ಮೂಲಕ ಅವರೊಬ್ಬ ರಾಷ್ಟ್ರೀಯವಾದಿ ಎಂಬುದನ್ನು ಜಾತಿಹಿಂದೂ ಸಮಾಜಕ್ಕೆ ತೋರಿಸಿದ್ದಾರೆ.

ರಾಷ್ಟ್ರೀಯತೆ ಮತ್ತು ರಾಷ್ಟ್ರ ನಿರ್ಮಾಣದ ಬಗ್ಗೆ ಬ್ರಿಟಿಷ್ ಆಡಳಿತ ಮತ್ತು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಧೋರಣೆಗಳನ್ನು ತಮ್ಮದೇ ಆದ ತಾತ್ವಿಕ ನೆಲೆಯಲ್ಲಿ ವಿಮರ್ಶಿಸಿದ ಅಂಬೇಡ್ಕರ್ ಅವರು ಭಾರತದಲ್ಲಿ ಒಂದು ಸಾಮಾನ್ಯ ರಾಷ್ಟ್ರೀಯತೆ (ಏಕರಾಷ್ಟ್ರೀಯತೆ)ಯನ್ನು ಹುಟ್ಟು ಹಾಕಬೇಕಾದ ಅಗತ್ಯತೆ ಇದೆ ಎಂದು ಪ್ರತಿಪಾದಿಸಿದರು. ಇದಕ್ಕೆ ಅವರು ನೀಡಿದ ಪ್ರಮುಖ ಕಾರಣವೆಂದರೆ, ಭಾರತದಲ್ಲಿನ ಜನಸಂಖ್ಯೆ. ಹಿಂದೂ, ಮುಸ್ಲಿಂ, ಸಿಖ್, ಇತ್ಯಾದಿ ಗುಂಪುಗಳಾಗಿ ಭಾವನಾತ್ಮಕವಾಗಿ ಚೂರಾಗಿ ಹೋಗಿದ್ದು, ಇಂತಹ ವಿಘಟನಾತ್ಮಕ ಭಾವನೆಗಳಿಂದ ರಾಷ್ಟ್ರೀಯತೆ ಹಾಗೂ ರಾಷ್ಟ್ರ ನಿರ್ಮಾಣ ಕಾರ್ಯ ಅಸಾಧ್ಯ ಎಂದು ವಿವರಿಸಿದರು.

ಸಾಮಾನ್ಯ ರಾಷ್ಟ್ರೀಯತೆ ಎಂದರೇನು? ಎಂಬುದನ್ನು ವಿಶ್ಲೇಷಿಸಿದ ಅಂಬೇಡ್ಕರ್ ಅವರು ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗಾಗಿ ಮೊದಲು ತಾನು ಭಾರತೀಯ ಎಂಬ ಹೆಮ್ಮೆಯ ಭಾವನೆ ಮೂಡುವಂತಾಗಬೇಕು. ಆ ನಂತರದಲ್ಲಿ ಧರ್ಮ, ಭಾಷೆ ಹಾಗೂ ಪ್ರದೇಶಗಳನ್ನಾಧರಿಸಿದ ಚಿಂತನೆಗಳು ಬೆಳೆಯಬೇಕೆಂಬುದೇ ಅಂಬೇಡ್ಕರ್ ಅವರ ರಾಷ್ಟ್ರೀಯತೆಯ ನಿಲುವಾಗಿತ್ತು. ಆದ್ದರಿಂದಲೇ, ಅಂಬೇಡ್ಕರ್ ಬಹಳಷ್ಟು ಸಂದರ್ಭದಲ್ಲಿ ನಾನೊಬ್ಬ ರಾಷ್ಟ್ರೀಯ ನಾಯಕನಾಗಿದ್ದು ನಾನು ಸದಾ ರಾಷ್ಟ್ರದ ಸೇವೆಗೆ ಮೊದಲು ಪ್ರಾತಿನಿಧ್ಯತೆಯನ್ನು ನೀಡುತ್ತೇನೆ ಹಾಗೂ ಈ ಸೇವೆಯನ್ನು ಯಾವುದೇ ಒಬ್ಬ ವ್ಯಕ್ತಿಗೆ ಅಥವಾ ಒಂದು ಸಂಘಟನೆಯ ಮರ್ಜಿಗೆ

ಒಳಗಾಗದೆ ಆಂತರಿಕ ಆತ್ಮಸಾಕ್ಷಿಗೆ ಬದ್ಧವಾಗಿ ರಾಷ್ಟ್ರದ ಸೇವೆಯನ್ನು ಮಾಡುತ್ತೇನೆ ಎಂದು ಅಂಬೇಡ್ಕರ್ ಅವರು ತಮ್ಮ ಅಚಲವಾದ ನಿಲುವನ್ನು ವ್ಯಕ್ತಪಡಿಸಿದ್ದರು.

ಸಾಮಾನ್ಯ ರಾಷ್ಟ್ರೀಯತೆ ಅಥವಾ ಏಕ ರಾಷ್ಟ್ರೀಯತೆಯ ತತ್ವವನ್ನು ಪ್ರಜಾಪ್ರಭುತ್ವವೆಂಬ ಸಾಧನವೆಂದೇ ಸಹಕಾರಿಯಾಗಬಲ್ಲದು ಎಂದು ಅಂಬೇಡ್ಕರ್ ತಿಳಿಸಿದರು. ಪ್ರಜಾಪ್ರಭುತ್ವ ತತ್ವಗಳ ಮಾನವ ಸಂಬಂಧವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದ್ದು, ಇದು ಯಾವುದೇ ಒಂದು ರಾಷ್ಟ್ರದ ನಾಗರೀಕತೆಯನ್ನು ಶ್ರೀಮಂತಗೊಳಿಸಿದ ಶಕ್ತಿಯನ್ನು ಹೊಂದಿದೆ ಎಂಬುದು ಅವರ ನಿಲುವಾಗಿತ್ತು. ಪ್ರಜಾಪ್ರಭುತ್ವ ಅರ್ಥಪೂರ್ಣವಾಗಿ ಆಚರಣೆಗೆ ಬರಬೇಕಾದರೆ ರಾಷ್ಟ್ರದ ಜನತೆಯಲ್ಲಿ ಮೊದಲು ತ್ಯಾಗ ಮತ್ತು ಅರ್ಪಣಾ ಮನೋಭಾವಗಳು ವ್ಯಕ್ತವಾಗಬೇಕು. ಆದ್ದರಿಂದ ಯಾವುದೇ ಒಂದು ರಾಷ್ಟ್ರದಲ್ಲಿ ರಾಷ್ಟ್ರೀಯತೆ ಮನೋಭಾವ ಬೆಳೆಯಲು ಅಲ್ಲಿನ ಜನತೆಯಲ್ಲಿ ತ್ಯಾಗ ಮನೋಭಾವನೆ ಹಾಗೂ ಅರ್ಪಣಾ ಸ್ವಭಾವಗಳ ಇರಬೇಕು. ಆದರೆ ಭಾರತದಂತಹ ಸಾಮಾಜಿಕ ಏರುಪೇರುಗಳನ್ನು ಹೊಂದಿರುವ ರಾಷ್ಟ್ರದಲ್ಲಿ ಈ ಅಂಶಗಳ ಕೊರತೆ ಎದ್ದು ಕಾಣುತ್ತದೆ ಎಂಬುದು ಅಂಬೇಡ್ಕರ್ ಅವರ ಪ್ರಬಲವಾದಂತಹ ವಾದವಾಗಿತ್ತು.

ಸರ್ವಾಧಿಕಾರವುಳ್ಳ ರಾಷ್ಟ್ರದಲ್ಲಿ ರಾಷ್ಟ್ರೀಯತೆ ಹಾಗೂ ರಾಷ್ಟ್ರದ ಬೆಳವಣಿಗೆಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಒಂದು ವೇಳೆ ರಾಷ್ಟ್ರ ಅಭಿವೃದ್ಧಿ ಹೊಂದಿದರು ಅದು ತಾತ್ಕಾಲಿಕ ಹಾಗೂ ಸೀಮಿತ ಚೌಕಟ್ಟಿನೊಳಗೆ ಮಾತ್ರ ಸಾಧ್ಯ ಎಂದು ವಿವರಿಸಿದ ತಾತ್ಕಾಲಿಕ ಹಾಗೂ ಸೀಮಿತ ಚೌಕಟ್ಟಿನೊಳಗೆ ಮಾತ್ರ ಸಾಧ್ಯ ಎನ್ನುವ ಅಂಬೇಡ್ಕರ್ ನೆಪೋಲಿಯನ್, ಹಿಟ್ಲರ್ ಹಾಗೂ ಮುಸಲೋನಿಯಂತಹ ಸರ್ವಾಧಿಕಾರಿಗಳು ಕಟ್ಟಿದ ಸಾಮ್ರಾಜ್ಯಗಳನ್ನು ಉದಾಹರಿಸುತ್ತಾರೆ. ಅವರೇ ಹೇಳುವಂತೆ ಸರ್ವಾಧಿಕಾರದಿಂದ ಯಾರೇ ಒಂದು ರಾಷ್ಟ್ರವನ್ನು ಪರಿಪೂರ್ಣದತ್ತ ಕೊಂಡೊಯ್ಯಲು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಸಾಮಾಜಿಕ ಹಿತಾಸಕ್ತಿಗೆ ಬದಲಾಗಿ, ರಾಷ್ಟ್ರದ ಹಿತಾಸಕ್ತಿಗೆ ಬದಲಾಗಿ ಒಂದು ಕೋಮಿನ ಅಥವಾ ಯಾವುದೇ ಒಂದು ವರ್ಗದ ಅಥವಾ ವ್ಯಕ್ತಿಯ ಹಿತಾಸಕ್ತಿಯೂ ಕೇಂದ್ರೀಕೃತವಾಗಿಯೇ ಕಾರ್ಯಪ್ರವೃತ್ತವಾಗಿರುತ್ತದೆ.

ಹೀಗೆ ರಾಷ್ಟ್ರದ ಏಕತೆ, ಸಮಾನತೆ, ಸ್ವಾತಂತ್ರ್ಯತೆಯು ರಾಷ್ಟ್ರದ ಸಮಗ್ರ ಸ್ಥಿತ್ಯಾಂತರಗಳನ್ನು ಆಧರಿಸಿರುತ್ತದೆ. ಅವುಗಳನ್ನು ಸರಿದೂಗಿಸಲು ರಾಷ್ಟ್ರೀಯತೆಯು ಅತ್ಯಮೂಲ್ಯವಾದ ಪ್ರಕ್ರಿಯೆಯೆಂಬುದನ್ನು ತಿಳಿಸಿ ಅವರಲ್ಲಿ ಅಡಕವಾಗಿದ್ದ ರಾಷ್ಟ್ರಪ್ರೇಮವನ್ನು ಅಂಬೇಡ್ಕರ್ ಅವರು ವ್ಯಕ್ತಪಡಿಸಿದ್ದಾರೆ.

**ಅಭ್ಯಾಸಿಸಿರುವ ಗ್ರಂಥಗಳು**


1. ಯಶೋಧ.ಬಿ.ಎನ್. ***ಅಂಬೇಡ್ಕರ್ ಅವರ ರಾಷ್ಟ್ರನಿರ್ಮಾಣದ ಪರಿಕಲ್ಪನೆ***
2. ಸುಮ.ಬಿ.ಯು. ***ಡಾ.ಬಿ.ಆರ್.ಅಂಬೇಡ್ಕರ್ ವರ್ತಮಾನದೊಂದಿಗೆ ಮುಖಾಮುಖಿ***
3. ಜವರಯ್ಯ.ಮ.ನ. ***ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಬೇಡ್ಕರ್***
4. ಜವರಯ್ಯ.ಮ.ನ. ***ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ***
5. Kuber. W.N. ***Ambedkar A Critical Study***
6. Jatav.D.R. ***Political Philosophy of Dr.B.R.Ambedkar***
7. Dhananjaya Keer. ***Dr.Ambedkar Life and Mission***
8. Shamal and K.S.Saxena***. Ambedkar – National Building***
9. Chagla.M.C. ***The individual and The State***
10. Desai.A.R. ***Social Background of Indian Nationalism***